**<u>ಮೇ: ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ ಜೆಎಂಎಫ್‌ಸಿ ನ್ಯಾಯಾಲಯ, ಮುಧೋಳ</u>**

CC.No. 809/2012
ಸಿಡಬ್ಲ್ಯೂ-10 ಪಿ.ಡಬ್ಲ್ಯೂ-3

| | |
|---|---|
| ಹೆಸರು | ಸಂಗನಗೌಡ ಪಾಟೀಲ |
| ತಂದೆಯ ಹೆಸರು | ಶೇಖರಗೌಡ |
| ವಯಸ್ಸು | 57 ವರ್ಷ |
| ಉದ್ಯೋಗ | ವ್ಯವಸಾಯ |
| ವಾಸಸ್ಥಳ | ಚಿಕ್ಕಗಲಗಲಿ ಗ್ರಾಮ. |

**ದಿನಾಂಕ: 07-08-2024 ರಂದು ಸಾಕ್ಷಿಯನ್ನು ಕರೆದು ಪ್ರಮಾಣ ವಚನ ಬೋದಿಸಲಾಯಿತು.**

**<u>ಮುಖ್ಯ ವಿಚಾರಣೆ:- ಎ.ಪಿ.ಪಿ ರವರಿಂದ.</u>**

ನನಗೆ ಚಾಸಾ-1,4 ರಿಂದ 6 ರವರ ಪರಿಚಯ ಇರುತ್ತದೆ. ಚಾಸಾ-5 ರವರು ತೀರಿಕೊಂಡಿರುತ್ತಾರೆ. ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ ಮತ್ತು ನಾನು ಪೋಲಿಸರ ಮುಂದೆ ಯಾವುದೇ ಹೇಳಿಕೆ ಮತ್ತು ಮರು ಹೇಳಿಕೆಯನ್ನು ನೀಡಿರುವುದಿಲ್ಲ.

***(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲು ಸ.ಸ.ಅ ರವರು ವಿನಂತಿಸಿದ್ದರಿಂದ ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)***

**<u>ಪಾಟಿ ಸವಾಲು- ಎ.ಪಿ.ಪಿ ರವರಿಂದ.</u>**

ದಿನಾಂಕ 10.06.2012 ರಂದು ಚಾಸಾ-1 ರವರು ನಾವು ಊರಿಗೆ ಹೋಗುತ್ತೇವೆ ಅಂತಾ ಅವರ ಮನೆಯ ಕಿಲಿಯನ್ನು ನನಗೆ ಕೊಟ್ಟು ಹೋಗಿದ್ದರು ಎಂದರೆ ಸರಿಯಲ್ಲ. ದಿನಾಂಕ 12.06.2012 ರಂದು ಸಾಯಂಕಾಲ ನಾನು ಮನೆಗೆ ಬಂದಾಗ ಚಾಸಾ-1 ರವರ ಮನೆ ಕಳ್ಳತನ ಆಗಿರುತ್ತದೆ ಎಂದು ಮತ್ತು ಸದರಿ ಮನೆಯಿಂದ ಕಳ್ಳರ ಚಾಸಾ-1 ರವರಿಗೆ ಸೇರಿದ 17 ತೋಲೆ 75 ಗ್ರಾಂದ ಬಂಗಾರದ ಆಭರಣಗಳನ್ನು ಕಳ್ಳತನ ಮಾಡಿಕೊಂಡು ಹೋಗಿರುತ್ತಾರೆ ಎಂದು ನನಗೆ ತಿಳಿದು ಬಂದಿತ್ತು ಎಂದರೆ ಸರಿಯಲ್ಲ. ನಂತರ ಆರೋಪಿತರು ಚಾಸಾ-1 ರವರ ಮನೆಯ ಬಾಗಿಲದ ಕೊಂಡಿಯನ್ನು ಮುರಿದು ಅತೀಕ್ರಮಣ ಪ್ರವೇಶ ಮಾಡಿ ಮನೆಯಲ್ಲಿದ್ದ ಬಂಗಾರದ ಆಭರಣಗಳನ್ನು ಕಳ್ಳತನ ಮಾಡಿಕೊಂಡ ಹೋದ ವಿಷಯ ನನಗೆ ಗೊತ್ತಾಯಿತು ಎಂದೆರ ಸರಿಯಲ್ಲ. ದಿನಾಂಕ 21.06.2012 ರಂದು ನನಗೆ ಪೋಲಿಸರು ಪೋಲಿಸ ಠಾಣೆಗೆ ಕರೆಯಿಸಿ ಅಲ್ಲಿದ್ದ 05 ಜನ ಆರೋಪಿತರನ್ನು ತೋರಿಸಿ ಇವರೆ ಚಾಸಾ-1 ರವರ ಮನೆಯಲ್ಲಿದ್ದ ಆಭರಣಗಳನ್ನು ಕಳ್ಳತನ ಮಾಡಿಕೊಂಡು ಹೋದ ವ್ಯಕ್ತಿಗಳು ಆಗಿರುತ್ತಾರೆ ಎಂದು ಹೇಳಿದ ಮೇರೆಗೆ ನಾನು ಅವರನ್ನು ನೋಡಿರುತ್ತೇನೆ ಮತ್ತು ಸದರಿ ವ್ಯಕ್ತಿಗಳು ಈಗ ನ್ಯಾಯಾಲಯದ ಮುಂದೆ ಇರುತ್ತಾರೆ ಎಂದರೆ ಸರಿಯಲ್ಲ.

ಈ ಪ್ರಕರಣದ ವಿಚಾರಣೆ ಕಾಲಕ್ಕೆ ನಾನು ದಿನಾಂಕ 13.06.2012 ರಂದು ಮತ್ತು ದಿನಾಂಕ 21.06.2012 ರಂದು ಈಗ ನನಗೆ ಓದಿ ಹೇಳಿದ ಹಾಗೇ ಹೇಳಿಕೆ ಮತ್ತು ಮರು ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆ ಮತ್ತು ಮರು ಹೇಳಿಕೆಯನ್ನು ಈಗ ನಿಪಿ-12 ಮತ್ತು 13 ಎಂದು ಗುರುತಿಸಲಾಯಿತು. ನಿಪಿ-12 ಮತ್ತು 13 ರಲ್ಲಿ ಬರೆದಿರುವ ಸಂಗತಿಗಳ ಬಗ್ಗೆ ನನಗೆ ಮಾಹಿತಿ ಇದ್ದರೂ ಸಹಿತ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟಿ ಸವಾಲುಃ** ಆರೋಪಿ ಪರ ವಕೀಲರು ಪಾಟಿ ಸವಾಲು ಏನು ಇಲ್ಲ ಎಂದು ನುಡಿದಿರುತ್ತಾರೆ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು )

ಓ ಹೇ ಕೇ ಸರಿ ಇದೆ.

Sd/-
ಪ್ರಧಾನ ದಿವಾಣಿ ನ್ಯಾಯಾಧೀಶರು
ಹಾಗೂ ಜೆಎಂಎಫ್‌ಸಿ ಮುಧೋಳ.

ಸಾಕ್ಷಿಯ ಸಹಿ